


ಮೇಷ್ಟ್ರು: ಮುಂದೆ ನೀನು ಏನಾಗಬೇಕು ಎಂದು ಅಂದ್ಕೊಂಡಿದ್ದೀಯಾ?
ಗುಂಡ: ಪ್ರಾಣಿವೈದ್ಯ ಆಗ್ತೀನಿ.
ಮೇಷ್ಟ್ರು: ಅದ್ಯಾಕೆ?
ಗುಂಡ: ಪ್ರಾಣಿಗಳು ಡಾಕ್ಟರ್ ಬಗ್ಗೆ ಕಂಪ್ಲೆಂಟ್ ಮಾಡುವುದಿಲ್ಲ ಸರ್!

★★★

ಕೋಲ್ಯ: ಲೇ ಈ ಕೇಸರಿಬಾತ್‌ನಲ್ಲಿ ಟೂತ್ ಪೇಸ್ಟ್ ವಾಸನೆ ಬರ್ತಿದೆಯಲ್ಲಾ ಯಾಕೆ?
ಕೋಲ್ಯನ ಹೆಂಡತಿ: ಮನೆಯಲ್ಲಿ ಲವಂಗ ಇರಲಿಲ್ಲ ರೀ.
ಕೋಲ್ಯ: ಸೋ...
ಕೋಲ್ಯನ ಹೆಂಡತಿ: ಟಿವಿಯಲ್ಲಿ ಈ ಟೂತ್ ಪೇಸ್ಟ್ ತೋರಿಸಿ ಇದರಲ್ಲಿ ಲವಂಗ ಇದೆ ಅಂತಿದ್ರು, ಅದಕ್ಕೆ ಕೇಸರಿ ಬಾತ್‌ಗೆ ಇದನ್ನೇ ಸ್ವಲ್ಪ ಹಾಕಿದೆ!

ಸಂಗ್ರಹ: ಸಿದ್ದೇಶ್ ಸಣ್ಣಗಿರಿ ಕೊಟ್ಟೂರು, ಮಡಿಕೇರಿ

- ಕೆಲವರಿಗೆ ಕಾರಿನ ಹಿಂದೆ ಸಿನಿಮಾ ಹೆಸರನ್ನು ಬರೆಸುವ ಹವ್ಯಾಸವಿರುತ್ತದೆ. ಅಂತೆಯೇ ಗುಂಡ ಹೊಸ ಕಾರನ್ನು ಕೊಂಡ ಮೇಲೆ ಅದರ ಹಿಂದೆ 'ಜನುಮ ಜನುಮದ ಅನುಬಂಧ' ಎಂದು ಬರೆಸಿದ. ಮರುದಿನ ಕಾರನ್ನು ರಸ್ತೆಗೆ ಒಯ್ದಾಗ 'ಪ್ರಥಮ ಚುಂಬನಂ ದಂತ ಭಗ್ನಂ' ಎಂಬ ಗಾದೆ ಮಾತಿನಂತೆ ಹಿಂದೆಯಿಂದ ವೇಗವಾಗಿ ಬಂದ ಕಾರು ಗುಂಡನ ಕಾರಿಗೆ ಗುದ್ದಿತು. ಆ ಕಾರಿನ ಹಿಂದೆ 'ನಾ ನಿನ್ನ ಬಿಡಲಾರೆ' ಎಂದು ಬರೆದಿತ್ತು.

- ಸಾಯುವಾಗ ತನ್ನ ಪತ್ನಿಯಿಂದ ಏನನ್ನೂ ಮುಚ್ಚಿಡಬಾರದೆಂದು ಬಯಸಿದ ಪತಿ ತನ್ನ ಪತ್ನಿಗೆ ಹೀಗೆ ಹೇಳಿದ... ಹೆಂಡ್ತಿ ನಾನು ನಿನಗೆ ಇಡೀ ಜೀವನ ಮೋಸ ಮಾಡುತ್ತಲೇ ಇದ್ದೆ. ನನಗೆ ಡಜನ್‌ಗಟ್ಟಲೇ ಸ್ತ್ರೀಯರ ಜೊತೆ ಸಂಬಂಧವಿತ್ತು. ಆಗ ಪತ್ನಿ, ರೀ ನಿಮಗೆ ಬೇರೆ ಮಹಿಳೆಯರ ಜೊತೆ ಸಂಬಂಧವಿದ್ದದ್ದು ನನಗೆ ಮೊದಲೇ ಗೊತ್ತಿತ್ತು. ಇನ್ನೊಂದು ಸತ್ಯ ತಿಳಿಸ ಬಯಸುತ್ತೇನೆ. ನೀವು ಸಾಯುತ್ತಿರುವುದು ಕಾಯಿಲೆಯಿಂದಲ್ಲ. ನಾನು ನಿಮಗೆ ಊಟದಲ್ಲಿ ಹಾಕಿಕೊಟ್ಟ ಸ್ಲೋ ಪಾಯಿಜನ್‌ನಿಂದ!

- ಉದ್ಯಮಿಯೊಬ್ಬನ ಸ್ವಗತ ಹೀಗಿತ್ತು... ಇಲ್ಲಿಯವರೆಗೆ ನನಗೆ ತುಂಬಾ ಮಂಡಿನೋವಿತ್ತು. ಹೀಗಾಗಿ, ನಡೆದಾಡಲೂ ಆಗುತ್ತಿರಲಿಲ್ಲ. ಮನೆಯಲ್ಲೇ ಇದ್ದೆ. ಈಗ ಬ್ಯಾಂಕಿನಿಂದ ಕೋಟಿಗಟ್ಟಲೆ ಸಾಲ ತೆಗೆದುಕೊಂಡಿದ್ದೇನೆ. ಜುಮ್ ಅಂತ ವಿದೇಶಕ್ಕೆ ಹಾರಿ ಕಾರಿನಲ್ಲೇ ಸುತ್ತಾಡಬಹುದು.

- ಹಬ್ಬಕ್ಕೆ ಏನೇನು ತೆಗೆದುಕೊಳ್ಳಬೇಕು ಎಂಬುದನ್ನು ಪತ್ನಿ ಪಟ್ಟಿ ಮಾಡಿ ಪತಿಗೆ ಕೊಟ್ಟು ಮೊದಲು ನಾವು ಏನನ್ನು ತೆಗೆದುಕೊಳ್ಳೋಣ ಎಂದಳು. ಪಟ್ಟಿ ನೋಡಿದ ಪತಿ ಮೊದಲು ಬ್ಯಾಂಕ್ ಲೋನ್ ತೆಗೆದುಕೊಳ್ಳೋಣ ಎಂದ!

ಸಂಗ್ರಹ: ಮುರಲೀಧರ ಕುಲಕರ್ಣಿ, ಬೀದರ್

ॐ ✝ ☪ ಸರ್ವೇಜನಃ ಸುಖಿನೋ ಭವಂತುಃ ॐ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ
ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.